# ಬೈಸಿಕೊಂಡರೂ ನೆಗೆಟಿವ್ ಪಾತ್ರ ಮೆಚ್ಚು

**ಭವ್ಯಶ್ರೀ ಪೂಜಾರಿ**
ಉದಯದ 'ಸುಂದರಿ'ಯ ಭಾರತಿ



◆ **ನಿಮ್ಮಲ್ಲಿ ಕಲೆಯ ಅಭಿರುಚಿ ಮೂಡಿದ್ದು ಹೇಗೆ?**

ಪ್ರಾಥಮಿಕ ಶಾಲೆಯಲ್ಲಿದ್ದಾಗಲೇ ಭರತನಾಟ್ಯದ ಜೊತೆ ಯಕ್ಷಗಾನವನ್ನೂ ಅಭ್ಯಾಸ ಮಾಡುತ್ತಿದ್ದೆ. ಪ್ರೌಢಶಾಲೆಗೆ ಬರುವ ಹೊತ್ತಿಗೆ ವಾರ್ಷಿಕೋತ್ಸವಗಳಿಗೆ ನನ್ನ ಆ ಹವ್ಯಾಸ ಸೀಮಿತವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಬೆಳ್ಳಾರೆ ಸಮೀಪದ ಹಳ್ಳಿಯವಳು. ಪ್ರದರ್ಶನ ಕಲೆಯಲ್ಲಿ ಪದವಿಯನ್ನು ಪಡೆದೆ. ಫೋಟೊ ನೋಡಿ ಉದಯದ 'ಅವಳು' ಸೀರಿಯಲ್‌ಗೆ ಆಡಿಷನ್ ಕರೆದರು. ಮೊದಲ ಯತ್ನದಲ್ಲಿಯೇ ಆಯ್ಕೆಯೂ ಆಯಿತು. ಅಲ್ಲಿಂದ 16 ಸೀರಿಯಲ್ ಮಾಡಿದ್ದೇನೆ. ಮೊದಲೆಲ್ಲ ಪುಟ್ಟ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದೆ. 'ಕಮಲಿ', 'ನಾಗಿಣಿ 2', 'ಮಂಗಳಗೌರಿ ಮದುವೆ', 'ಅರಮನೆ ಗಿಳಿ', 'ಸುಂದರಿ', ಮತ್ತು 'ಪುಟ್ಟಕ್ಕನ ಮಕ್ಕಳು'ನಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ.

◆ **'ಸೌಂದರ್ಯ'ವನ್ನು ಭಿನ್ನವಾಗಿ ನೋಡುವ ಪ್ರಯತ್ನ ಇಲ್ಲಿದೆ ಎಂದೆನಿಸುತ್ತದೆ ಅಲ್ವಾ?**

ಸದ್ಯದ ಕಥೆಯ ಸಂದೇಶವೇನೆಂದರೆ ಸೌಂದರ್ಯದ ಮಾಪನ ಬಣ್ಣ ಅಲ್ಲ. ಬದ್ಧತೆಯಿಂದ ಗುರಿಮುಟ್ಟುವ ಚಿಂತನೆಗೆ ಒತ್ತು ಕೊಟ್ಟಿದೆ. ಐಎಎಸ್ ಅಧಿಕಾರಿ ಆಗಬೇಕು ಎನ್ನುವುದು ಕಥಾನಾಯಕಿಯ ಕನಸು. ಗ್ರಾಮೀಣ ಪ್ರದೇಶದ ಹುಡುಗಿಯರಿಗೆ ಸ್ಫೂರ್ತಿಯಾಗುವಂತೆ ಇದೆ. ಸಾಧನೆಗೆ ದೈಹಿಕ ರೂಪ ಲಾವಣ್ಯ ಮುಖ್ಯ ಅಲ್ಲ. ಇಲ್ಲಿ ಸೌಂದರ್ಯ ಆಂತರಿಕವಾಗಿ ಇರುತ್ತದೆ ಎಂದು ಹೇಳುತ್ತದೆ. ಬೌದ್ಧಿಕವಾಗಿಯೂ ಅದು ಅಲಂಕರಿಸುತ್ತದೆ. ನೋಡುವ ನೋಟದಲ್ಲಿ ಸೌಂದರ್ಯ ಇರುತ್ತದೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಸೌಂದರ್ಯದ ಪರಿಕಲ್ಪನೆ ಇರುತ್ತದೆ. ಬುದ್ಧಿ, ಭಾವನೆ, ಪ್ರತಿಭೆ, ಗುಣ ಎಲ್ಲವೂ ಮುಖ್ಯ.

◆ **ನೀವು ಭಾರತಿಯಾಗಿ ಹೇಳುವುದಾದರೆ...**

ಇದು ಪಾಸಿಟಿವ್ ಪಾತ್ರ. ನನ್ನ ವೈಯಕ್ತಿಕ ಬದುಕಿಗೆ ತುಂಬ ಹತ್ತಿರವಾಗಿದೆ. ಸುಂದರಿ ಮತ್ತು ಭಾರತಿ ನಡುವೆ ಅನ್ಯೋನ್ಯವಾದ ಸ್ನೇಹವಿದೆ. ಭಾರತಿಗೆ ಏನೇ ಆದರೂ ಸುಂದರಿ ಬಿಟ್ಟುಕೊಡುವುದಿಲ್ಲ. ನಾನು ತುಂಬ ಇಷ್ಟಪಟ್ಟು ಮಾಡುವ ಪಾತ್ರ. ನಾನು ನೆಗೆಟಿವ್ ಪಾತ್ರಗಳನ್ನೇ ಹೆಚ್ಚು ಮಾಡಿದ್ದು, ನನ್ನ ಮಟ್ಟಿಗೆ ಭಿನ್ನ ಪಾತ್ರ.

◆ **ಬಣ್ಣದ ಜಗತ್ತಿಗೆ ಹೊಸ ಕಲಾವಿದರು ಹೇಗೆ ಹೊಂದಿಕೊಳ್ಳಬೇಕು?**

ಮೊದಲು ಯಾರೇ ಬಂದರೂ ಎಲ್ಲ ಹೊಸತು. ಇಲ್ಲಿ ತುಂಬ ಶ್ರಮದಿಂದ ಕೆಲಸ ಮಾಡಲೇಬೇಕಾಗುತ್ತದೆ. ಯಾವುದೋ ಒಂದು ಪಾತ್ರಕ್ಕೆ ಅವಕಾಶ ಇದ್ದರೆ ನೂರು ಜನ ಅದಕ್ಕೆ ಆಡಿಷನ್ ನೀಡಿರುತ್ತಾರೆ. ಆ ಪಾತ್ರ ಸಿಕ್ಕ ಮೇಲೆ ಒಬ್ಬ ಸಲೆಬ್ರಿಟಿ ಆಗುವುದಕ್ಕಿಂತ ಒಬ್ಬ ಕಲಾವಿದೆ ಆಗಿ ಹೋಗಬೇಕು. ಅದೇ ಹೆಚ್ಚಿನ ಅವಕಾಶಗಳಿಗೆ ಮೆಟ್ಟಿಲಾಗುತ್ತದೆ. ನಮ್ಮ ತಲೆಯಲ್ಲಿ ಸೆಲೆಬ್ರಿಟಿ ಎನ್ನುವ ಭಾವನೆ ಬಂದರೆ ಅವಕಾಶಗಳು ಕೈ ತಪ್ಪುವ ಸಾಧ್ಯತೆ ಹೆಚ್ಚುತ್ತದೆ. ಈ ಕ್ಷೇತ್ರವೇ ಹಾಗೆ, ಯಾರೇ ಬಂದರೂ ಕಲಾವಿದರಾಗಬೇಕು ಎಂದು ಬರಬೇಕು. ನಟಿಸುವುದನ್ನು ಜನ ಗುರುತಿಸಬೇಕು ಎನ್ನುವ ಭ್ರಮೆ ಬೇಕಿಲ್ಲ. ನಮ್ಮ ಪಾತ್ರವನ್ನು ಜನಮೆಚ್ಚುವಂತೆ ಮಾಡಿದರೆ, ಅವರೇ ಅದನ್ನು ಗುರುತಿಸುತ್ತಾರೆ. ಅದನ್ನು ಪ್ರದರ್ಶನ ಮಾಡಿಕೊಳ್ಳುವಂತೆ ಆಗಬಾರದು.

◆ **ಜನ ನಿಮ್ಮನ್ನು ಹೇಗೆ ಗುರುತಿಸುತ್ತಾರೆ?**

'ಪುಟ್ಟಕ್ಕನ ಮಕ್ಕಳು'ನಲ್ಲಿ ಮತ್ತೆ ನೆಗೆಟಿವ್ ಪಾತ್ರ ಮಾಡುತ್ತಿದ್ದೇನೆ. ಅದರಿಂದಾಗಿ ಜನರ ನಡುವೆ ಪೂರ್ವಿ ಆಗಿದ್ದೇನೆ. 'ಕಮಲಿ'ಯ ಕಾರಣಕ್ಕೆ ಪಿಂಕಿ ಆಗಿದ್ದೆ. ಪಾತ್ರ ಬಿಟ್ಟು ನಾಲ್ಕು ವರ್ಷ ಆದರೂ ಜನ ಪಿಂಕಿ ಎಂದೇ ಗುರುತಿಸುತ್ತಿದ್ದರು. ಈಗ ಕೆಲವೆಡೆ ಪೂರ್ವಿಯಾದರೆ ಇನ್ನೂ ಕೆಲವೆಡೆ ಭಾರತಿಯಾಗಿದ್ದೇನೆ. ನೆಗೆಟಿವ್ ಪಾತ್ರಗಳನ್ನೇ ಹೆಚ್ಚು ಮಾಡಿದ್ದೇನೆ. ಜನ ನನ್ನ ಪಾತ್ರ ನೋಡಿ ಬೈದುಕೊಳ್ಳುತ್ತಾರೆ. ನನ್ನಿಂದ ಪಾಸಿಟಿವ್ ಪಾತ್ರ ಸಾಧ್ಯ ಇಲ್ಲ ಎಂದೇ ಯೋಚಿಸುತ್ತಿದ್ದೆ. ಅಂತಹ ಸಂದರ್ಭದಲ್ಲಿ ಭಾರತಿ ಪಾತ್ರ ಸಿಕ್ಕಿದೆ. ಇದನ್ನು ಮಾಡಿದ ನಂತರವೇ ನನಗೊಂದು ಆತ್ಮವಿಶ್ವಾಸ ಮೂಡಿದೆ. ಪಾಸಿಟಿವ್ ಪಾತ್ರದಲ್ಲಿಯೂ ನನ್ನನ್ನು ಇಷ್ಟಪಡ್ತಾರೆ. ನನಗೂ ಪಾಸಿಟಿವ್ ಪಾತ್ರ ಮಾಡಲು ಬರುತ್ತದೆ ಎನ್ನುವುದು ಗೊತ್ತಾಯಿತು. ಅದಕ್ಕೆ ಇದೊಂದು ಅವಕಾಶ.

◆ **ಬಣ್ಣ ಹಚ್ಚಿದ ನಂತರ ನಿಮ್ಮಲ್ಲಿ ಆದ ಬದಲಾವಣೆ?**

ಎರಡನೇ ಬಾರಿಗೆ ಪ್ರವೇಶ ಮಾಡಿದ್ದೇನೆ. ಮೊದಲು ನನಗೆ ಈ ಕ್ಷೇತ್ರ ಅಲ್ಲ ಎಂದು ಬಿಟ್ಟಿದ್ದೆ. ಇಲ್ಲಿ ತುಂಬ ತಾಳ್ಮೆ ಇರಬೇಕಾಗುತ್ತದೆ. ಇವತ್ತು ಒಂದು ಪಾತ್ರ ಸಿಕ್ಕಿದೆ ಅಂದರೆ ಅದು ಎಷ್ಟು ದಿನ ಉಳಿಯುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಆಗ ಇದ್ದ ಕೆಲಸವನ್ನು ಬಿಟ್ಟು ಬಂದಿದ್ದೆ. ನಮ್ಮ ಕುಟುಂಬ ನನ್ನ ಮೇಲೆ ಅವಲಂಬನೆ ಆಗಿತ್ತು. ಎರಡು ಸೀರಿಯಲ್ ಮಾಡಿದ ನಂತರ ಅವಕಾಶ ಸಿಗಲೇ ಇಲ್ಲ. ವರ್ಷಗಳು ಉರುಳಿದ ನಂತರ ಮತ್ತೆ ಅವಕಾಶ ಸಿಗಲು ಆರಂಭವಾಯಿತು. ಇಲ್ಲಿ ಉಳಿಯಬೇಕು ಎಂಬ ಅಚಲ ನಿರ್ಧಾರವೇ ಮುನ್ನಡೆಸುತ್ತಿದೆ. ಒಳ್ಳೆಯ ಕಲಾವಿದೆ ಆಗಬೇಕು ಎನ್ನುವುದೇ ಕನಸು. 'ಪುಟ್ಟಕ್ಕನ ಮಕ್ಕಳು'ನಲ್ಲಿ ನನ್ನದು ರಿಪ್ಲೇಸ್ ಪಾತ್ರ. ಅದಕ್ಕೂ ಒಳ್ಳೆಯ ಪ್ರತಿಕ್ರಿಯೆ ಬರ್ತಾ ಇದೆ.

■ ರಾಘವೇಂದ್ರ ಕೆ.